# ವರದಿ

ದಿನಾಂಕ ೨೫, ೨೦೧೭ ರಂದು ರಾಜ್ಯಶಾಸ್ತ್ರ ವಿಭಾಗದ ಹಳೆಯ ವಿದ್ಯಾರ್ಥಿಗಳ ಸಂಘವು ಹಮ್ಮಿಕೊಂಡ ಸಂತೋಷಕೂಟದಲ್ಲಿ ಸುಮಾರು ೩೦ ಜನ ಹಳೆಯ ಸದಸ್ಯರು ಪಾಲ್ಗೊಂಡು, ಭವಿತವ್ಯದ ರಾಜ್ಯಶಾಸ್ತ್ರ ಹಾಗೂ ಚಾಣಕ್ಯಾ ಹಳೆಯ ವಿದ್ಯಾರ್ಥಿಗಳ ಸಂಘದ ಕುರಿತು ಚಿಂತನ ಮಂತನ ಮಾಡಿದರು ಪಧಾದಿಕಾರಿಗಳು ಹಾಗೂ ಸಂಘದ ಸದಸ್ಯರು ಈ ಸಂದರ್ಭದಲ್ಲಿ ಮಾತನಾಡಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಕಾರ್ಯದರ್ಶಿಗಳಾದ ಹರೀಶ್ ರಾಮಸ್ವಾಮಿಯವರು ಚಾಣಕ್ಯಾ ಹಳೆಯ ವಿದ್ಯಾರ್ಥಿಗಳ ಸಂಘ ಸ್ಥಾಪನೆಯಾಗಲು ಕಾರಣಕರ್ತರಾದವರನ್ನು ನೆನಪಿಸಿಕೋಳ್ಳುವುದರ ಮೂಲಕ ಸಂಘದ ಮಹತ್ವವನ್ನು ವಿವರಿಸಿದರು. ಮುಂದುವರೆದು, ಹಳೆಯ ಸದಸ್ಯರಾದ ಮತ್ತು ಚಾಣಕ್ಯಾ ಸಂಘವು ರಚಿತಗೊಳ್ಳಲು ಕಾರಣಿಭೂತರಾದ ಡಾ. ಎಸ್ ಎಸ್ ಪಟಗುಂದಿಯವರು ಈ ಸಂಘದ ಸಂಪರ್ಕವು ಎಲ್ಲ ಕಡೆಯು ಹರಡಬೇಕು, ಇದರ ಮೂಲಕ ವಿದ್ಯಾರ್ಥಿಗಳಿಗೆ ಬೋದನೆ, ಕಲಿಕೆ ಮತ್ತು ಸಂಶೋಧನೆಗೆ ಅನುಕೂಲಕರವಾಗುವ ಹಾಗೆ ಅನೌಪಚಾರಿಕ ಸಭೆಗಳು ನಡೆಯಬೇಕು. ಹಾಗೇ ವಿಚಾರ ವಿನಿಮಯವಾಗಬೇಕೆಂಬ ಸಲಹೆಗಳನ್ನು ನೀಡಿದರು. ಮತ್ತೋರ್ವ ಸದಸ್ಯರಾದ ಡಾ. ಪಾಳೇದರವರು ರಾಜ್ಯಶಾಸ್ತ್ರ ವಿಭಾಗದಿಂದ ಉನ್ನತ ಹುದ್ದೆಯಲ್ಲಿರುವವರೆಲ್ಲರನ್ನೂ ಕರೆದು ಸನ್ಮಾನಿಸುವ ಮೂಲಕ ರಾಜ್ಯಶಾಸ್ತ್ರ ವಿಭಾಗವು ಒಂದು ಕುಟುಂಬವಾಗಿ ಮಾರ್ಪಡಬೇಕು ಎಂಬ ಸೂಚನೆಯನ್ನು ನೀಡಿದರು. ಚಾನಕ್ಯಾ ಸಂಘದ ಗೌರವಾಧ್ಯಕ್ಷರಾದ ಡಾ. ಬಿ ಎಮ್ ರಾತ್ನಕರರವರು ಎಲ್ಲರೂ ಸಂಘವನ್ನು ಬೆಳೆಸಲು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಸಂಘದ ಸದಸ್ಯರಾಗುವಂತೆ ಪ್ರೇರೇಪಿಸಿದರು. ಖಜಾಂಚಿಗಳಾದ ಡಾ. ಎಮ್ ಯರಿಸ್ವಾಮಿಯವರು ಸಂಘವು ನಿರಂತರವಾಗಿ ಅಸ್ತಿತ್ವದಲ್ಲಿರಬೇಕಾದರೆ ಅದಕ್ಕೆ ಹಣಕಾಸಿನ ನೆರವು ಅವಶ್ಯಕ. ಆ ಹಿನ್ನಲೆಯಲ್ಲಿ ಯಾರಾದರೂ ದೇಣಿಗೆಯನ್ನು ಅಥವಾ ಸಂಘ ಹೊರತರುತ್ತಿರುವ ಚಾಕ್ಯಾ ಜರ್ನಲ್ ಕೊಂಡುಕೊಳ್ಳುವ ಮುಖಾಂತರ ಸಹಕಾರದ ಅಗತ್ಯತೆಯನ್ನು ಪ್ರಸ್ತಾಪಿಸಿದರು. ವಿಭಾಗದ ಪ್ರಾಧ್ಯಾಪಕರಾದ ಡಾ. ಎಮ್ ಜಿ ಖಾನರವರು ಇಗಾಗಲೇ ಹಳೆಯ ವಿದ್ಯಾರ್ಥಿಗಳನ್ನು ವಿಭಾಗಕ್ಕೆ ಕರೆಸುವ ಪದ್ಧತಿ ನಮ್ಮಲಿದೆ, ಜೊತೆಗೆ ನಾವೆಲ್ಲರೂ ಸಹಾಯ ಸಹಕಾರ ನೀಡುವುದರ ಮೂಲಕ ಸಂಘವನ್ನು ಬೆಳೆಸೋಣ ಕರೆ ನೀಡಿದರು. ಅಧ್ಯಕ್ಷರಾದ ಡಾ. ಜಿ ಬಿ ನಂದನರವರು ಸಂಘವನ್ನು ಬಲಪಡಿಸುವೆಡೆ ಪ್ರಾಯೋಗಿಕವಾಗಿ ಶ್ರಮಿಸೋಣ ಎಂದು ಕರೆ ನೀಡಿದರು. ಶ್ರೀ ಬಸಪ್ಪ ಅಥಣಿ ನಿರೂಪಿಸಿದರು, ಡಾ. ಎನ್ ಎಮ್ ಸಾಲಿಯವರು ಸ್ವಾಗತಿಸಿದರು, ಶ್ರೀ ಶಶಿಧರ ಮುದಕವಿ ವಂದಿಸಿದರು. ಅಲ್ಪೋಪಹಾರದೊಂದಿಗೆ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.